# ಆಹಾ ಸುದ್ದಿ!

★ ಸಸಿತೋಟ

ಬ್ರಿಟನ್ನಿನ ಟೆಡ್ ರಿಚರ್ಡ್ಸ್‌ಗೆ ತಾನು ಸಾಕಿದ ಗಿಳಿ ಎಂದರೆ ಮಹಾ ಪ್ರೀತಿ. ಎಷ್ಟೆಂದರೆ ಕಣ್ಣು ಹಾಗೂ ಮುಖದ ಮೇಲೆ ಹಚ್ಚೆ ಹಾಕಿಸಿಕೊಂಡು ಗಿಳಿಯಂತೆ ಕಾಣಿಸಿಕೊಳ್ಳಲು ಯತ್ನಿಸಿದ. ಈಗ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಕಿವಿಗಳನ್ನು ಶಸ್ತ್ರಚಿಕಿತ್ಸೆ ಮೂಲಕ ತೆಗೆಸಿ ಹಾಕಿದ. ಹೊರ ಕಿವಿಯಿಲ್ಲದ ಗಿಳಿ ಈತನ ಬೋಳು ಮುಖ ನೋಡಿ ಮುಖ ಸಿಂಡರಿಸಿರಬಹುದು. ಅದಕ್ಕೇ ಈಗ ಮೂಗನ್ನು ಗಿಳಿ ಮೂಗಿನಂತೆ ಮಾಡಿಕೊಳ್ಳಲು ಹೊರಟಿದ್ದಾನೆ ಈ ಮಹಾಶಯ. ಜಾತಿ ಬಾಂಧವನೂ ಇಷ್ಟು ಕುರೂಪಿಯಾಗಿ ಇರಲಿಕ್ಕಿಲ್ಲ ಎಂದು ಅಸಹ್ಯದಿಂದ ಗಿಳಿ ಹಾರಿ ಹೋಗದಿದ್ದರೆ ಸಾಕು.



ಬ್ರೆಜಿಲ್‌ನ ಕಾರಾಗೃಹದಲ್ಲಿ ಕೈದಿಗಳು ಇತ್ತೀಚೆಗೆ ತಮ್ಮ ಸಂಬಂಧಿಕರಿಗೆ ಆಯುರ್ವೇದ ಮಸಾಜ್ ನೀಡಿ ಧನ್ಯರಾದರಂತೆ. ಕೊಲೆ, ಸುಲಿಗೆಯಂತಹ ಅಪರಾಧವೆಸಗಿದ ಈ ಕೈದಿಗಳಿಗೆ ಸ್ವಯಂ ಸೇವಾ ಸಂಸ್ಥೆಯೊಂದು ಆಯುರ್ವೇದ ಕುರಿತು ತರಬೇತಿ ನೀಡಿ, ಹತ್ಯೆ ಮಾಡುವುದು ಖುಷಿ ನೀಡುತ್ತದೋ ಅಥವಾ ಮಸಾಜ್ ಮಾಡುವುದು ಮಜಾ ನೀಡುತ್ತದೋ ಎಂದು ಮನದಟ್ಟು ಮಾಡುತ್ತಿದೆಯಂತೆ. ಬೆಂಕಿ ಬಿದ್ದ ಮೇಲೆ ಬಾವಿ ತೋಡುವುದು ಎಂದರೆ ಇದೇ ಇರಬಹುದು.



ಆಸ್ಟ್ರೇಲಿಯಾದ ಮರಗಪ್ಪೆಗಳು ಮೈಕ್ರೊಫೋನ್ ಹಿಡಿದು ಕೋರಸ್ ಸಂಗೀತ ಹಾಡುತ್ತಿವೆ. ಅಲ್ಲಿ ವಿವಿಧ ರೀತಿಯ ನೂರಾರು ಕಪ್ಪೆಗಳ ದನಿ ಮುದ್ರಿಸಲಾಗಿದ್ದು, ಆ ಮೂಲಕ ಕಪ್ಪೆಗಳನ್ನು ಗುರುತಿಸುವ ಆ್ಯಪ್ ಸಿದ್ಧಪಡಿಸಲಾಗಿದೆಯಂತೆ. ಇನ್ನು ಮುಂದೆ ವಟರ್ ವಟರ್ ಸಂಗೀತಗಾರರು ಆಲ್ಬಂ ಕೂಡಾ ಹೊರತಂದು ಪೈಪೋಟಿ ನೀಡಬಹುದು.



ಇತ್ತೀಚೆಗೆ ತಮ್ಮ ದೇಶಕ್ಕೆ ಭೇಟಿ ನೀಡಿದ್ದ ಚೀನಾ ಅಧ್ಯಕ್ಷ ಕ್ಸಿಪಿಂಗ್ ಅವರ ಜೊತೆ ಬ್ರಿಟನ್ ಪ್ರಧಾನಿ ಡೇವಿಡ್ ಕೆಮರೂನ್ ಲಂಡನ್ನಿನ ಪಬ್ ಒಂದರಲ್ಲಿ ಬಿಯರ್ ಸವಿದರಂತೆ. ಜೊತೆಗೆ ಪಬ್‌ನಲ್ಲೇ ಪ್ರಮುಖ ವಿಷಯಗಳ ಕುರಿತು ಚರ್ಚೆಯನ್ನೂ ನಡೆಸಿದರಂತೆ. ಚಾಯ್ ಪೆ ಚರ್ಚಾದಂತೆ ಬಿಯರ್ ಪೆ ಬಾತೆ ಯಾಕಾಗಬಾರದು!



ವಿದೇಶಗಳಲ್ಲಿ ಹ್ಯಾಲೋವೀನ್ ಬಂತೆಂದರೆ ಬಲು ಸಂಭ್ರಮ. ಈ ಪ್ಲೇಟ್‌ನಲ್ಲಿರುವ ಮಗುವಿನ ತಲೆ, ಕೈ, ಮೆದುಳಿನಂತೆ ಕಾಣುವುದು ತಿನ್ನುವ ಕ್ಯಾಂಡಿ. ಮೆಕ್ಸಿಕೋದಲ್ಲಿ ಹೆದರಿಕೆ ಹುಟ್ಟಿಸುವ ಈ ತಿಂಡಿಗಳು ಬಲು ರುಚಿಕರವಾಗಿರುತ್ತವಂತೆ. ಮೇಲಿನಿಂದ ಚೆನ್ನಾಗಿ ಕಾಣುವ ತಿಂಡಿಗಳು ರುಚಿಯಲ್ಲಿ ಭಯಂಕರ ಎನಿಸುತ್ತವಾ?

ಬ್ಲ್ಯಾಕ್ ಕಾಫಿ ಕುಡಿಯುವವರು ಹಿಂಸಾನಂದರಂತೆ, ಮನೋವ್ಯಾಧಿಯುಳ್ಳವರಂತೆ. ಹೀಗಂತ ಅಧ್ಯಯನವೊಂದು ಹೇಳಿದೆ. ಅಂದರೆ ಕಹಿ ತರಕಾರಿ ತಿನ್ನುವ ಹಿಂಸೆಯಿಂದ ಪಾರಾಗುವವರು ಈ ನೆಪ ಒಡ್ಡಬಹುದು.